# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 99 |
| ಸದಸ್ಯರ ಹೆಸರು | : | ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 12.12.2018 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಕೊಡಗು ಜಿಲ್ಲೆಯಲ್ಲಿ ಕಳೆದ ಆಗಸ್ಟ್ ತಿಂಗಳಿನಲ್ಲಿ ಮಳೆ ಅನಾಹುತದಿಂದ ಕೊಚ್ಚಿಹೋದ ಗ್ರಾಮಗಳು ಯಾವುವು; ಈ ಗ್ರಾಮಗಳಲ್ಲಿ ಆದ ನಷ್ಟದ ಸಂಪೂರ್ಣ ವಿವಿರಗಳನ್ನು ನೀಡುವುದು; | ಗ್ರಾಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| 2 | ಮಳೆ ಅನಾಹುತದಿಂದ ಜಿಲ್ಲೆಯಲ್ಲಿ ಎಷ್ಟು ಎಕರೆ ಕೃಷಿ ಭೂಮಿ ನಾಶವಾಗಿರುತ್ತದೆ. | ಮಳೆ ಅನಾಹುತದಿಂದಾಗಿ ಕೊಡಗು ಜಿಲ್ಲೆಯಲ್ಲಿ ಒಟ್ಟು 130633.88 ಹೆಕ್ಟೇರ್ ಕೃಷಿ ಭೂಮಿ ನಾಶವಾಗಿರುತ್ತದೆ. |
| 3 | ಈ ಸಂದರ್ಭದಲ್ಲಿ ಮೃತರಾದವರ ಸಂಖ್ಯೆ ಎಷ್ಟು; ಇವರುಗಳ ಕುಟುಂಬಕ್ಕೆ ನೀಡಲಾದ ಪರಿಹಾರ ಕ್ರಮಗಳೇನು; (ವಿವಿರ ನೀಡುವುದು) | ಕೊಡಗು ಜಿಲ್ಲೆಯಲ್ಲಿ 22 ಮಾನವ ಜೀವ ಹಾನಿಯಾಗಿದ್ದು, ಈ ಸಂಬಂಧ ಎಸ್.ಡಿ.ಆರ್.ಎಫ್ ಅಡಿ ರೂ.4.00 ಲಕ್ಷ, ಮಾನ್ಯ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ ರೂ.2.00 ಲಕ್ಷ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ರೂ.1.00 ಲಕ್ಷಗಳನ್ನು ಒಟ್ಟು ರೂ.7.00ಲಕ್ಷಗಳನ್ನು ಮರಣ ಹೊಂದಿದವರ ವಾರಸುದಾರರಿಗೆ ನೀಡಲಾಗಿದೆ. |
| 4 | ಕೊಡಗು ಜಿಲ್ಲೆಯಲ್ಲಿ ಆದ ನಷ್ಟವನ್ನು ಭರ್ತಿ ಮಾಡಲು ಹಾಗೂ ಪರಿಹಾರ ನೀಡಲು ಸರ್ಕಾರದ ತೆಗೆದುಕೊಂಡ ಕ್ರಮಗಳೇನು? | ಕಂದಾಯ ಇಲಾಖೆಯಿಂದ ಎಸ್.ಡಿ.ಆರ್.ಎಫ್. ಅಡಿಯಲ್ಲಿ ರೂ.28.00 ಕೋಟಿಗಳು ಹಾಗೂ ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ರೂ.89.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರವಾಹದಿಂದ ಬಾಧಿತವಾದ ಕುಟುಂಬಗಳು ಗೃಹೋಪಯೋಗಿ ವಸ್ತುಗಳನ್ನು ಖರೀದಿಸಲು ತಲಾ ರೂ.50,000/- ದಂತೆ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ರೂ.6.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮನೆ ಕಳೆದುಕೊಂಡ 840 ಕುಟುಂಬಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಪ್ರತೀ ಮನೆಗೆ ರೂ.9.85 ಲಕ್ಷಗಳ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲು ರೂ.82.84 ಕೋಟಿಗಳನ್ನು ಹಾಗೂ ಬಡಾವಣೆ ನಿರ್ಮಿಸಲು ರೂ.31.63 ಕೋಟಿಗಳನ್ನು ಮಂಜೂರು ಮಾಡಲಾಗಿದೆ.<br>ರಾಜ್ಯದ ಕರಾವಳಿ ಹಾಗೂ ಮಲೆನಾಡು ಪ್ರದೇಶದ 8 ಜಿಲ್ಲೆಗಳಲ್ಲಿ ಉಂಟಾಗಿದ್ದು, ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದಿಂದ ರೂ.722.07ಕೋಟಿ ಕೋರುತ್ತಾ ಮೆಮೊರಾಂಡಮ್ ಸಲ್ಲಿಸಲಾಗಿತ್ತು, ಕೇಂದ್ರ ಸರ್ಕಾರದಿಂದ ರೂ.525.22 ಕೋಟಿಗಳು ಬಿಡುಗಡೆಯಾಗಿದ್ದು, ಸದರಿ ಮೊತ್ತವನ್ನು ಪ್ರವಾದಿಂದಾದ ಹಾನಿಯ ಅನುಪಾತದಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವುದು. |

ಕಂಇ 279 ಟಿಎನ್ಆರ್ 2018

(ಆರ್.ವಿ. ದೇಶಪಾಂಡೆ)
ಕಂದಾಯ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು

## ಅನುಬಂಧ

**ಕೊಡಗು ಜಿಲ್ಲೆಯಲ್ಲಿ ಕಳೆದ ಆಗಸ್ಟ್ ತಿಂಗಳಿನಲ್ಲಿ ಮಳೆ ಅನಾಹುತದಿಂದ ಹಾನಿಗೊಳಗಾದ ಗ್ರಾಮಗಳ ವಿವರ:**

| ಕ್ರ.ಸಂ. | ತಾಲ್ಲೂಕು | ಗ್ರಾಮಗಳ ಹೆಸರು |
|---|---|---|
| 1 | ಮಡಿಕೇರಿ | ಗಾಳಿಬೀಡು |
| 2 | | ಕಾಲೂರು |
| 3 | | ಬಾರಿಬೆಳ್ಳಚ್ಚು |
| 4 | | ಆವಂಡಿ |
| 5 | | ಹೊದಕಾನ |
| 6 | | ಹಮ್ಮಿಯಾಲ |
| 7 | | ಹಚ್ಚಿನಾಡು |
| 8 | | ನಿಡುವಟ್ಟು |
| 9 | | 1ನೇ ಮೊಣ್ಣಂಗೇರಿ |
| 10 | | ಮೇಘತ್ತಾಳು |
| 11 | | ಮಕ್ಕಂದೂರು |
| 12 | | ಹೆಮ್ಮೆತ್ತಾಳು |
| 13 | | ಮುಕ್ಕೋಡ್ಲು |
| 14 | | ಹೆಬ್ಬೆಟ್ಟಗೇರಿ |
| 15 | | ಕರ್ಣಂಗೇರಿ |
| 16 | | ಕೆ.ಬಾಡಗ (ಮಡಿಕೇರಿ ನಗರ) |
| 17 | | 2ನೇ ಮೊಣ್ಣಂಗೇರಿ |
| 18 | | ಮದೆ |
| 19 | | ಕಾಟಕೇರಿ |
| 20 | | ಅರೆಕಲ್ಲು |
| 21 | | ಹೆರವನಾಡು |
| 22 | ಸೋಮವಾರಪೇಟೆ ತಾಲ್ಲೂಕು | ಕುಂಬಾರಗಡಿಗೆ |
| 23 | | ಮಂಕ್ಯ |
| 24 | | ಬಾಚಳ್ಳಿ |
| 25 | | ತಾಕೇರಿ |
| 26 | | ಹಾನಗಲ್ಲು |
| 27 | | ಶಿರಂಗಳ್ಳಿ |
| 28 | | ಕಿರುದಾಲೆ |
| 29 | | ಕಿರಗಂದೂರು |
| 30 | | ಸೂರ್ಲಬ್ಬಿ |
| 31 | | ಮೂವತ್ತೊಕ್ಲು |
| 32 | | ಇಗ್ಗೋಡ್ಲು |
| 33 | | ಕಿಬ್ಬೆಟ್ಟ |
| 34 | | ಹಾಡಗೇರಿ |
| 35 | | ಹಾಲೇರಿ |
| 36 | | ಕಾಂಡನಕೊಲ್ಲಿ |
| 37 | | ಐಗೂರು |
| 38 | | ಕೊಪ್ಪತ್ತೂರು |
| 39 | | ಜಂಬೂರು |
| 40 | | ಗರ್ವಾಲೆ |
| 41 | | ಕಿಕ್ಕರಳ್ಳಿ |